**ಕಿರಾತಕ ರಾಜ:** ಸ್ವಾಮಿ, ಶಿವನಿಗೆ ನಾನು ಇಲ್ಲೇ ದೇಗುಲವನ್ನು ಕಟ್ಟಿ ಪೂಜಿಸುವೆ.

**ಅಲ್ಲಮ:** ಗೆಳೆಯ, ಕಲ್ಲು ದೇವಾಲಯಕ್ಕಿಂತಲೂ, ನಿನ್ನ ಮನಮಂದಿರದಿಂದ ಒಸರುವ ಭಕ್ತಿ ಮುಖ್ಯ ನೋಡು.

**ದೇಹದೊಳಗೆ ದೇವಾಲಯವಿರ್ದು ಮತ್ತೆ**
**ಬೇರೆ ದೇವಾಲಯವೇಕೆ?**
**ಎರಡಕ್ಕೆ ಹೇಳಲಿಲ್ಲಯ್ಯಾ?**
**ಗುಹೇಶ್ವರ, ನೀ ಕಲ್ಲಾದರೆ ನಾನೇನಪ್ಪೆನು ?**

**ಕಿರಾತಕ ರಾಜ :** ಹಾಗಾದರೆ ನಾನೇನು ಮಾಡಲಿ? ಮುಂಡನವನ್ನು ಮಾಡಿಕೊಂಡು, ಭಸ್ಮಲೇಪಿತನಾಗಲೇ?

**ಅಲ್ಲಮ:** ಬರೇ ಸನ್ಯಾಸಿಯ ವೇಷ ಧರಿಸಿದರೆ ಶಿವನೊಲಿಯಲಾರ.

**ತನು ಬತ್ತಲೆಯಿದ್ದಡೇನು**
**ಮನ ಶುಚಿಯಾಗದನ್ನಕ್ಕರ ?**
**ಮಂಡೆ ಬೋಳಾದಡೇನೋ**
**ಭಾವ ಬಯಲಾಗದನ್ನಕ್ಕರ ?**
**ಭಸ್ಮವ ಪೂಸಿದೊಡೇನು**
**ಕರಣಾದಿ ಗುಣಂಗಳನೊತ್ತಿ,**
**ಮೆಟ್ಟಿ ಸುಡದನ್ನಕ್ಕರ?**
**ಇಂತೀ ಆಶೆಯ ವೇಷದ ಭಾಷೆಗೆ**
**ನೀ ಸಾಕ್ಷಿಯಾಗಿ ಕಳೆಯುವೆನು ಗುಹೇಶ್ವರಾ**

**ಕಿರಾತಕ ರಾಜ :** ನನ್ನನ್ನು ಉದ್ಧರಿಸಿದ ಮಹಾನುಭಾವ, ನನ್ನ ಅಹಂಕಾರದಿಂದ 'ಶಿವಭಕ್ತರನ್ನು ರಕ್ಷಿಸಲು ಶಿವನೇ ಬರಲಿ, ನೋಡಿಬಿಡುತ್ತೇನೆ' ಎನ್ನುತ್ತಿದ್ದೆ. ಅಂತೆಯೇ ಶಿವನಂತೆ ನೀನು ಬಂದೆ. ಶಿವಭಕ್ತರ ಜೊತೆಗೆ ನನ್ನನ್ನೂ ರಕ್ಷಿಸಿದೆ. ನನ್ನ ಅಜ್ಞಾನವನ್ನು ಹೋಗಲಾಡಿಸಿ, ಜ್ಞಾನದೀವಿಗೆಯನ್ನು ಇತ್ತ, ನೀನೇ ನನ್ನ ದೇವರು, ನೀನೇ ನನಗೆ ಶಿವ.

**ಅಲ್ಲಮ:** **ನೀರಿಲ್ಲದ ನೆಳಲಿಲ್ಲದ ಬೇರಿಲ್ಲದ**
**ಗಿಡ ಹುಟ್ಟಿತ್ತು.**
**ತಲೆಯಿಲ್ಲದ ಮೃಗ ಬಂದು**
**ಮೇಯುತ್ತಾ ಗಿಡವ**
**ಕಣ್ಣಿಲ್ಲದ ಕುರುಡನು ಕಂಡನಾ ಮೃಗವ**
**ಕೈಯಿಲ್ಲದ ವ್ಯಾಧನು ಎಚ್ಚನಾ ಮೃಗವ**
**ಕಿಚ್ಚಿಲ್ಲದ ನಾಡಿಗೊಯ್ದು**
**ಸುಟ್ಟು ಬಾಣಸವ ಮಾಡೆ**
**ಲಿಂಗಕ್ಕರ್ಪಿತವಾಯಿತ್ತು ಗುಹೇಶ್ವರ.**

**ಕಿರಾತಕ ರಾಜ :** ಸ್ವಾಮಿ, ತಾವು ಶಿವಸ್ವರೂಪಿ ಪ್ರಭುದೇವರು, ರಾಶಿರಾಶಿ ಕೆಂಡವನ್ನು ಮೆಟ್ಟಿ ಬೂದಿ ಮಾಡಿ ಬರುವವರು. ಹಾಲಾಹಲವನ್ನು ಕುಡಿದು ಅರಗಿಸಿ ನಗುಮುಖ ತಾಳುವವರು. ನೀವು ಈ ಬಡವನ ಮನೆಯ ಆತಿಥ್ಯವನ್ನು ಸ್ವೀಕರಿಸಬೇಕು.

**ಅಲ್ಲಮ:** ಅಗತ್ಯವಾಗಿ ಆಗಲಿ.

**ನೀ–ನಾನೆಂಬ ಭಾವವಾರಿಂದಾಯಿತ್ತು**
**ಹೇಳಾ ?**
**ನೀನೆಂಬುದಜ್ಞಾನ !**
**ನಾನೆಂಬುದೇ ಮಾಯಾಧೀನ!**
**ನೀನೆನ್ನದೆ ನಾನೆನ್ನದೆ ಇಪ್ಪ ಸುಖವ**
**ಭಿನ್ನವಿಲ್ಲದೆ ಅರಿಯಬಲ್ಲರೆ**
**ಆ ಸುಖವು ನಿಮಗರ್ಪಿತ ಕಾಣಾ**
**ಗುಹೇಶ್ವರಾ**

ಗೆಳೆಯಾ, ಇನ್ನು ಮುಂದೆ ಏನು ಮಾಡಬೇಕೆಂದಿರುವೆ?

**ಕಿರಾತಕ ರಾಜ:** ದೇವಾ, ನೀನೇ ನನ್ನ ಗುರು. ಗುಹೆಯೊಳಗಿರುವ ಶಿವಭಕ್ತರ ಕ್ಷಮೆಯಾಚಿಸಿ, ಅವರು ಬಂದೆಡೆಗೆ ಅವರನ್ನು ಕಳುಹಿಸುವೆ. ನನ್ನಲ್ಲಿರುವ ಸಿರಿಯನ್ನು ಬಡವರಿಗೆ ಹಂಚಿ ಕೂಡಲಸಂಗಮಕ್ಕೆ ತೆರಳುವೆ. ನೀನು ನನಗೆ ಜ್ಞಾನದೃಷ್ಟಿಯನ್ನಿತ್ತೆ. ನನ್ನನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸಿದೆ. ನನ್ನ ಕಣ್ಣಿನ ಮಾಯಾಪೊರೆಯ ಕಳಚಿದೆ. ನೀನೇ ನನ್ನ ದೇವರು, ನೀನೇ ನನ್ನ ಶಿವ.

**ಅಲ್ಲಮ:** ತಮ್ಮಾ, ನೀನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದು, ಪುಟವಿಟ್ಟ ಚಿನ್ನದಂತೆ ಪರಿಶುದ್ಧನಾಗಿರುವೆ. ಇನ್ನು, ನೀನೊಬ್ಬ ದೊಡ್ಡ ಶಿವಭಕ್ತನಾಗಿರುವೆ. ನಿನಗೆ ಮಂಗಳವಾಗಲಿ.

**ಹೊನ್ನು ಮಾಯೆ ಎಂಬರು**
**ಹೆಣ್ಣು ಮಾಯೆ ಎಂಬರು**
**ಮಣ್ಣು ಮಾಯೆ ಎಂಬರು**
**ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆಯಲ್ಲ**
**ಮನದ ಮುಂದಣಾಸೆಯೆ ಮಾಯೆ ಕಾಣಾ**
**ಗುಹೇಶ್ವರಾ**

*(ಅಲ್ಲಮನು ಮುಂದೆ ಹೋಗುತ್ತಿರಲು, ಹಿಂದಿನಿಂದ ಕಿರಾತಕ ರಾಜನು ಆತನನ್ನು ಹಿಂಬಾಲಿಸುವನು.)*

(ಪರದೆ ಬೀಳುತ್ತದೆ)

**ಆಧಾರ ಗ್ರಂಥಗಳು :**


೧. **ಅಲ್ಲಮಪ್ರಭು** – ಅ.ನ.ಕೃ

೨. **ಪರಿಪೂರ್ಣದೆಡೆಗೆ** –
ಹೆಚ್. ತಿಪ್ಪೇರುದ್ರಸ್ವಾಮಿ


## ಬದುಕಿಗೊಂದು ಬೆಳಕು

### ಮುಯ್ಯಿಗೆ ಮುಯ್ಯಿ ಶಾಂತಿ ನೀಡುವುದಿಲ್ಲ

ಸಿಖ್ಖರ ಗುರು ಗೋವಿಂದಸಿಂಹರು ಒಂದಾದ ಮೇಲೊಂದರಂತೆ ಕೋಟೆಕೊತ್ತಲಗಳನ್ನು ಗೆಲ್ಲುತ್ತ, ಸರಹಿಂದ್ ಎಂಬ ಪಟ್ಟಣಕ್ಕೆ ಕಾಲಿಡುತ್ತಿದ್ದಂತೆಯೇ "ಮುಯ್ಯಿಗೆ ಮುಯ್ಯಿ! ಈ ಪಟ್ಟಣವನ್ನು ಅಗ್ನಿಗೆ ಆಹುತಿ ಕೊಡಬೇಕು" ಎಂದು ಸೈನಿಕರು ವೀರಾವೇಶದಿಂದ ಕೂಗಾಡತೊಡಗಿದರು. ಇಲ್ಲಿಯೇ ಗುರುಗೋವಿಂದ ಸಿಂಹನ ಚಿಕ್ಕ ವಯಸ್ಸಿನ ಮಕ್ಕಳನ್ನು ಮೊಗಲರು ನಿರ್ದಯವಾಗಿ ಜೀವಸಹಿತ ಹೂಳಿದ್ದರು. ಸೇಡು ತೀರಿಸಿಕೊಳ್ಳುವ ಭಾವನೆಯಿಂದ ಸೈನಿಕರೆಲ್ಲರೂ ಆಕ್ರೋಶದಿಂದ ಕೂಗುತ್ತಿದ್ದುದನ್ನು ಕಂಡು ಗೋವಿಂದ ಸಿಂಹರಿಗೆ ಬಹಳ ದುಃಖವಾಯಿತು. "ಸೋದರರೆ, ನಿಮ್ಮ ಮನಸ್ಸಿನ ಪರಿಸ್ಥಿತಿಯನ್ನು ನಾನು ಅರಿತುಕೊಳ್ಳಬಲ್ಲೆ. ಆದರೆ ಸ್ವಲ್ಪ ತಾಳ್ಮೆಯಿಂದ ಯೋಚಿಸಿ ನೋಡಿ, ಇದು ಸರಿಯೇ ಎಂದು. ಈ ನಗರದ ಪ್ರಜೆಗಳಿಂದ ನಮಗೆ ಏನಾದರೂ ತೊಂದರೆ ಆಗಿದೆಯೇ? ಅವರೇನಾದರೂ ಅನ್ಯಾಯ ಮಾಡಿದ್ದಾರೆಯೆ? ಆದ್ದರಿಂದ ಆಕ್ರೋಶದಿಂದ ಇಡೀ ನಗರಕ್ಕೆ ಬೆಂಕಿ ಹಾಕುವುದು ಅನ್ಯಾಯ, ಅಧರ್ಮ. ಬೇರೆಯವರು ಅಧರ್ಮಿಗಳಾಗಿದ್ದಾರೆ ಎಂದಮಾತ್ರಕ್ಕೆ ನಾವೂ ಅಧರ್ಮವನ್ನು ಆಚರಿಸುವುದು ಎಳ್ಳಷ್ಟೂ ಸರಿಯಲ್ಲ, ಅಲ್ಲವೆ? ಧರ್ಮಮಾರ್ಗವನ್ನೇ ಅನುಸರಿಸುವ ನಮಗೆ ಇದು ಶೋಭೆ ತರುವುದಿಲ್ಲ. ನನ್ನ ಮಕ್ಕಳ ಹತ್ಯೆಯಿಂದ ಆದ ಆಘಾತವನ್ನು ನಾನು ಸಹಿಸಿಕೊಂಡಿದ್ದೇನೆ. ನಮ್ಮ ಈ ಜೈತ್ರಯಾತ್ರೆಯಲ್ಲಿ ನನಗೆ ಯಾವುದೇ ದ್ವೇಷಭಾವನೆಯಿಲ್ಲ. ಈ ನಿರಪರಾಧಿಗಳನ್ನು ಶಿಕ್ಷಿಸಿ ನಾವೇಕೆ ಅವರಿಗೆ ತೊಂದರೆ ಕೊಡಬೇಕು? ನಾವು ನಮ್ಮ ಕತ್ತಿ, ಗುರಾಣಿಗಳನ್ನು ಧರ್ಮಸ್ಥಾಪನೆಗಾಗಿ ಉಪಯೋಗಿಸುತ್ತೇವೆ ಎಂದು ಪಣ ತೊಟ್ಟಿದ್ದೇವೆ. ಅದರಿಂದ ಕೊಂಚವೂ ನಾವು ಹಿಂದೆ ಸರಿಯಬಾರದಲ್ಲವೇ? ಅನ್ಯಾಯ, ಅಧರ್ಮಗಳು ಇರುವ ಕಡೆ ನಮ್ಮ ಆಯುಧಗಳನ್ನು ಉಪಯೋಗಿಸಬೇಕು. ಎಲ್ಲಿ ನಮ್ಮ ಶತ್ರುಗಳು ರೀತಿನೀತಿಗಳಲ್ಲಿ ಉತ್ತಮರಾಗಿ, ತಮ್ಮ ನಡವಳಿಕೆಯನ್ನು ತಿದ್ದಿಕೊಳ್ಳುತ್ತಾರೋ, ಅಲ್ಲಿ ನಮ್ಮ ದ್ವೇಷವೂ ಕೊನೆಗೊಳ್ಳುತ್ತದೆ ಎನ್ನುವುದನ್ನು ಮನಗಾಣಿರಿ. 'ಹೊಡೆತಕ್ಕೆ ಹೊಡೆತ' ಎಂಬ ಸೇಡಿನ ಭಾವನೆಯಿಂದ ಸಿಕ್ಕ ಗೆಲುವು ಅಶಾಶ್ವತ. ಅದರಿಂದ ಶಾಂತಿ ಕೊಂಚವೂ ಸಿಗದು. ನೆಮ್ಮದಿಯೂ ಇರಲಾರದು."

# ತಸ್ಮೈ ಶ್ರೀ ಗುರವೇ ನಮಃ

ಡಾ. ರಾಜಶೇಖರ ಮ. ಪಾಟೀಲ

**ಗುರು ಅಥವಾ ಶಿಕ್ಷಕನು ಪ್ರಾಚೀನ ಕಾಲದಲ್ಲಿ ಮಾತ್ರವಲ್ಲ, ಆಧುನಿಕ ಕಾಲದಲ್ಲಿಯೂ ವಿದ್ಯಾಭ್ಯಾಸದ ಕೇಂದ್ರಬಿಂದು ವಾಗಿದ್ದಾನೆ. ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯಲ್ಲಿಯೂ ಗುರುವಿನ ಪಾತ್ರವು ಎಳ್ಳಷ್ಟೂ ಕಡಮೆಯಾಗಿಲ್ಲ. ಈ ಅಂಶವನ್ನು ವಿದ್ವತ್ಪೂರ್ಣವಾಗಿ ವಿವರಿಸಿರುವ ಲೇಖಕರು ಬಿಜಾಪುರ ಜಿಲ್ಲೆಯ ಸಿಂಧಗಿ ಯಲ್ಲಿರುವ ಜಿ.ಪಿ.ಪಿ. ಮಹಾವಿದ್ಯಾಲಯದ ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಸಹಪ್ರಾಧ್ಯಾಪಕರಾಗಿದ್ದಾರೆ.**



**ಗು**ರು ಯಾವುದೇ ಸಮಾಜದ ಸಂಸ್ಕೃತಿಯನ್ನು ನಿರ್ಮಿಸಬಲ್ಲ ಹಾಗೂ ದೇಶವನ್ನು ಕಟ್ಟಬಲ್ಲ ಸಾಮರ್ಥ್ಯ ವುಳ್ಳವನಾಗಿದ್ದಾನೆ. 'ಗುರು' ಶಬ್ದ ಸಂಸ್ಕೃತದ ಎರಡಕ್ಷರಗಳಿಂದ ಸಂಯೋಜಿತಗೊಂಡಿದೆ. 'ಗು' ಎಂದರೆ 'ಕತ್ತಲೆ', 'ರು' ಎಂದರೆ ಕತ್ತಲೆಯನ್ನು ಕಳೆಯುವವನು ಎಂಬರ್ಥವನ್ನು ಇದು ನೀಡುತ್ತದೆ. ಭಾರತೀಯ ತತ್ತ್ವಶಾಸ್ತ್ರದಲ್ಲಿ ಕತ್ತಲೆ ಮೌಢ್ಯದ ಪ್ರತೀಕ, ಬೆಳಕು ಜ್ಞಾನದ ಪ್ರತೀಕ. ಗುರುವಾದವನು ಶಿಷ್ಯರನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕರೆದುಕೊಂಡು ಹೋಗುವ ವ್ಯಕ್ತಿಯಾಗಿದ್ದಾನೆ (**ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ**). ಗುರು ಶಿಷ್ಯರನ್ನು ಜ್ಞಾನಮಾರ್ಗಕ್ಕೆ ಕೊಂಡೊಯ್ಯುವ ವ್ಯಕ್ತಿಯಾಗಿದ್ದಾನೆ. ಮುಂಡಕೋಪನಿಷತ್ತಿನಲ್ಲಿ ಹೇಳಿದಂತೆ ಗುರು ಎರಡು ತೆರನಾದ ವಿದ್ಯೆಯನ್ನು ನೀಡುತ್ತಾನೆ. ಒಂದು 'ಅಪರಾ ವಿದ್ಯೆ', ಇನ್ನೊಂದು 'ಪರಾವಿದ್ಯೆ'. ಅಪರಾವಿದ್ಯೆ ಎಂಬುದು ಈಗಾಗಲೇ ಪ್ರಪಂಚದಲ್ಲಿ ಪ್ರಸಿದ್ಧವಾಗಿರುವ ಶಿಕ್ಷಣವಾಗಿದೆ, ಅಂದರೆ ಜ್ಞಾನಶಾಖೆಗಳಾದ ಭೌತವಿಜ್ಞಾನ, ಇತಿಹಾಸ, ರಸಾಯನಶಾಸ್ತ್ರ, ಸಮಾಜಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ. ಪರಾವಿದ್ಯೆ ಎಂಬುದು ಕಾಲ, ಸ್ಥಳ ಮೀರಿದ ಸ್ವಜ್ಞಾನ ಅಂದರೆ, ಮನುಷ್ಯ ತನ್ನನ್ನು ತಾನು ತಿಳಿದುಕೊಳ್ಳುವುದು. ನಾನಾರು? ಏಕೆ ಬಂದೆ? ಎಲ್ಲಿಗೆ ಹೋಗುತ್ತೇನೆ? ಅಥವಾ ಏನಾಗುತ್ತೇನೆ ಎಂಬುದನ್ನು ತಿಳಿಸುವುದೇ ಪರಾವಿದ್ಯೆ. ಹಿಂದೆ ಶಿಷ್ಯರಿಗೆ ಈ ಎರಡು ತೆರನಾದ ವಿದ್ಯೆಗಳನ್ನೂ ಗುರುಕುಲದಲ್ಲಿ ಕಲಿಸಲಾಗುತ್ತಿತ್ತು. ಈಗ ಕೇವಲ ಅಪರಾ ವಿದ್ಯೆಯನ್ನು ಮಾತ್ರ ಕಲಿಸಲಾಗುತ್ತಿದೆ. ಹೀಗಾಗಿ ಇಂದಿನ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಸಾಮರ್ಥ್ಯದಿಂದ, ಅತೀಂದ್ರಿಯವಾದ ವಿಷಯಗಳನ್ನು ಕಲಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಕಾರಣಕ್ಕಾಗಿ ಇತ್ತೀಚಿನ ದಿನಗಳಲ್ಲಿ 'ಗುರು' ಎಂಬ ಪದವು ತುಂಬ ಲಘುವಾಗಿ ಬಳಕೆಯಾಗುತ್ತಿದೆ. ಗುರುವಿನ ಮಹಿಮೆಯ ಬಗ್ಗೆ ಎಷ್ಟು ಹೇಳಿದರೂ ಸಾಲದು. ನಮ್ಮ ಪುರಾತನ ಗ್ರಂಥಗಳಲ್ಲಿ ಬಹಳ ಕಡೆ ಗುರುವಿನ ಮಹತ್ವವನ್ನು ವಿವರಿಸಲಾಗಿದೆ. ಗುರುಗಳ ಗುರು ಆಗಿದ್ದ ಶ್ರೀಶಂಕರಾಚಾರ್ಯರು ತಮ್ಮ 'ಗುರು ಅಷ್ಟಕಂ' ನಲ್ಲಿ ಗುರುವಿನ ಮಹಿಮೆಯನ್ನು ಕೊಂಡಾಡಿದ್ದಾರೆ.

ಶ್ರೇಷ್ಠ ಗುರುವಿನಲ್ಲಿ ಇರಬೇಕಾದ ಏಳು ಗುಣಗಳನ್ನು ಹೀಗೆ ಪಟ್ಟಿ ಮಾಡಬಹುದು:

೧. ಗುರುವಾದವನು ಉತ್ತಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೊಂದಿರಬೇಕು. ಗುರುವು ಶಿಷ್ಯನಿಗೆ ಮಾದರಿಯಾಗುವ ಮಾನಸಿಕ ಪರಿಪಕ್ವತೆಯನ್ನೂ, ದೈಹಿಕ ದೃಢತೆಯನ್ನೂ ಪಡೆದಿರಬೇಕು.

೨. ಎರಡನೆಯದಾಗಿ, ಗುರುವು ಬಹುಮುಖ ವಿಷಯ ಸಾಮರ್ಥ್ಯವನ್ನು ಹೊಂದಿರಬೇಕು. ಹಲವು ವಿಷಯಗಳನ್ನು ವಿವರಿಸಬಲ್ಲ, ಬಹುಮುಖ ಶಕ್ತಿಯನ್ನು ಅವನು ಹೊಂದಿರಬೇಕು ಎನ್ನುವುದೇ ಇದರ ಅಭಿಪ್ರಾಯ. ಆಗ ಮಾತ್ರ ಗುರುವು ತನ್ನ ಶಿಷ್ಯರ ಪ್ರೀತಿ, ಗೌರವಗಳಿಗೆ ಪಾತ್ರನಾಗಲು ಸಾಧ್ಯವಾಗುತ್ತದೆ.

೩. ಗುರುವಿನಲ್ಲಿರಬೇಕಾದ ಇನ್ನೊಂದು ಮುಖ್ಯ ಲಕ್ಷಣವೆಂದರೆ, ಶೀಲ. ಗುರುವು ತನ್ನ ಜೀವನದಲ್ಲಿ ಶ್ರೇಷ್ಠ ಧ್ಯೇಯವನ್ನು ಹೊಂದಿರಬೇಕಲ್ಲದೆ, ಪವಿತ್ರ ಆಶಯವನ್ನೂ ಹೊಂದಿರಬೇಕು.

೪. ಹಾಗೆಯೇ ಗುರುವು ಉದಾರ ಮನೋಭಾವನೆ, ವಿಶಾಲ ಹೃದಯ ಮತ್ತು ಉದಾತ್ತ ಮನೋಭಾವದ ವ್ಯಕ್ತಿ ಯಾಗಿರಬೇಕು. ಆತನು ಶಿಷ್ಯರ ಬಗ್ಗೆ ಹಾಗೂ ಇತರರ ಬಗ್ಗೆ

ಗೌರವ ಭಾವನೆಯನ್ನು ಹೊಂದಿರಬೇಕು. ಹಾಗಾದಾಗ ಮಾತ್ರ ಶಿಷ್ಯರಾಗಲಿ ಅಥವಾ ಸಹೋದ್ಯೋಗಿಗಳಾಗಲಿ ಅವನನ್ನು ಗೌರವಿಸುತ್ತಾರೆ.

೫. ಐದನೆಯ ಲಕ್ಷಣವೆಂದರೆ ಗುರುವಾದವನು ದೊಡ್ಡ ಮನಸ್ಸಿನವನಾಗಿರಬೇಕು. ಜ್ಞಾನಪ್ರದಾನ ಮಾಡುವಾಗ ಉದಾರ ಮನಸ್ಸಿನಿಂದ ಏನೆಲ್ಲ ನೀಡಬೇಕೋ, ಅದೆಲ್ಲವನ್ನೂ ನೀಡಬೇಕು. ಅಂದರೆ ನಿಷ್ಕಲ್ಮಷವಾದ ಭಾವದಿಂದ ಜ್ಞಾನವನ್ನು ಧಾರೆ ಎರೆಯಬೇಕು. ಹೀಗಾದಾಗ ಮಾತ್ರ ಗುರುವಿನ ಕಾರ್ಯ ಪೂರ್ಣಗೊಳ್ಳುವುದು. ಗುರುವು ತನ್ನನ್ನು ಮೀರಿಸುವ ಶಿಷ್ಯರನ್ನು ರೂಪಿಸಬೇಕು. ಮನುಕುಲದ ಇತಿಹಾಸದಲ್ಲಿ ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ಪ್ಲೇಟೊನ ಬೋಧನೆ ಇಲ್ಲದಿದ್ದಲ್ಲಿ, ಅರಿಸ್ಟಾಟಲ್‌ನಂತಹ ಶಿಷ್ಯರು ಬೆಳಕಿಗೆ ಬರುತ್ತಿರಲಿಲ್ಲ; ಬಿಲ್ವಿದ್ಯೆಯಲ್ಲಿ ದ್ರೋಣರನ್ನು ಮೀರಿಸುವಷ್ಟು ಪಾರಂಗತನಾದ ಅರ್ಜುನನ ಪರಿಚಯ ಕೂಡ ಜಗತ್ತಿಗೆ ಆಗುತ್ತಿರಲಿಲ್ಲ.

೬. ಆರನೆಯ ಲಕ್ಷಣವೆಂದರೆ, ತ್ಯಾಗ ಹಾಗೂ ಸಮರ್ಪಣಾ ಮನೋಭಾವನೆ. ಗುರುವು ನಿಃಸ್ವಾರ್ಥಿಯಾಗಿರಬೇಕು. ತನ್ನನ್ನು ತಾನು ಸಂಪೂರ್ಣವಾಗಿ ಬೋಧನೆಯಲ್ಲಿ ತೊಡಗಿಸಿಕೊಳ್ಳಬೇಕು. ವೈಯಕ್ತಿಕ ಹಿತಾಸಕ್ತಿಯಿಂದ ಕೆಲಸ ಮಾಡಿದರೆ, ಅದು ಸ್ವಾರ್ಥಕ್ಕೆ ಒಯ್ಯುವುದು. ಹೀಗಾಗಿ ಅದಕ್ಕೆ ಬೆಲೆಕೊಡದೆ ತನ್ನನ್ನು ಸಂಪೂರ್ಣವಾಗಿ ಅಧ್ಯಯನ ಮತ್ತು ಅಧ್ಯಾಪನದಲ್ಲಿ ತೊಡಗಿಸಿಕೊಳ್ಳಬೇಕು. ಗುರುವು ದೂರದೃಷ್ಟಿಯನ್ನು ಹೊಂದಿರಬೇಕಲ್ಲದೆ, ತನ್ನ ಶಿಷ್ಯರಲ್ಲಿ ಕಲಿಕೆಯ ಆಸಕ್ತಿಯನ್ನು ಮೂಡಿಸಬೇಕು. ಒಬ್ಬ ಒಳ್ಳೆಯ ಗುರು, ಒಳ್ಳೆಯ ಕಲಿಕಾಕಾರನೂ ಹೌದು. ರವೀಂದ್ರನಾಥ ಟ್ಯಾಗೋರರು ಹೀಗೆ ಹೇಳುತ್ತಾರೆ: "A teacher can never truly teach unless he is still learning himself" – "ಒಬ್ಬ ಶಿಕ್ಷಕನಾದವನು ತಾನು ಇನ್ನೂ ಕಲಿಯುತ್ತ ಇರದಿದ್ದರೆ, ಎಂದಿಗೂ ನಿಜವಾದ ಅರ್ಥದಲ್ಲಿ ಬೋಧಿಸಲಾರನು."

೭. ಗುರುವಿನ ಬಳಿ ಇರಬೇಕಾದ ಏಳನೆಯ ಲಕ್ಷಣವೆಂದರೆ, ಶ್ರೇಷ್ಠ ಆದರ್ಶವನ್ನು ಹೊಂದಿರುವುದು. ಎಲ್ಲದರಲ್ಲೂ ಉತ್ಕೃಷ್ಟತೆಯನ್ನು ಬಯಸುವುದೇ ಗುರುವಾದವನ ಪರಮೋಚ್ಚ ಗುರಿಯಾಗಿರಬೇಕು. ಭೌತಿಕ ಜ್ಞಾನವಾಗಲಿ, ಧಾರ್ಮಿಕ ಜ್ಞಾನವಾಗಲಿ, ಅವನು ಅತ್ಯುನ್ನತವಾದುದನ್ನೇ ಬೋಧಿಸಬೇಕು. ಆ ಬೋಧನೆಯಲ್ಲಿ, ವಿಷಯದ ಅರಿವಿನಲ್ಲಿ ಯಾವುದೇ ಗೊಂದಲವಿರಬಾರದು. ಗುರುವಿನ ಗುರಿ ಸ್ಪಷ್ಟವಾಗಿರಬೇಕು ಹಾಗೂ ಅದನ್ನು ತಲುಪುವ ದಾರಿ ಸರಳ ಹಾಗೂ ನೇರವಾಗಿರಬೇಕು. ಹೀಗಾದಾಗ ಮಾತ್ರ ಉತ್ಕೃಷ್ಟತೆಯನ್ನು ಹೊಂದಲು ಸಾಧ್ಯವಾಗುವುದು.

ಭಾರತೀಯ ಸಂಪ್ರದಾಯದಲ್ಲಿ ಗುರುವಿಗೆ ಪರಮೋಚ್ಚ ಸ್ಥಾನವನ್ನು ಕಲ್ಪಿಸಲಾಗಿದೆ. ಗುರುವೇ ಬ್ರಹ್ಮ, ಗುರುವೇ ವಿಷ್ಣು ಮತ್ತು ಗುರುವೇ ಸಾಕ್ಷಾತ್ ಶಿವನೆಂದು ಬಣ್ಣಿಸಲಾಗಿದೆ. ಬ್ರಹ್ಮನು ಸೃಷ್ಟಿಯ ನಿರ್ಮಾತೃ. ಗುರುವನ್ನು ಬ್ರಹ್ಮನಿಗೆ ಏಕೆ ಹೋಲಿಸಲಾಗಿದೆ ಎಂದರೆ, ಗುರು ಜ್ಞಾನಜಗತ್ತನ್ನು ಸೃಷ್ಟಿಸುತ್ತಾನೆ. ಹಾಗೆಯೇ ಗುರುವು ವಿಷ್ಣು ಹೇಗೆ ಆಗುತ್ತಾನೆ ಎನ್ನುವುದಕ್ಕೆ ಹೀಗೆ ವಿವರಣೆ ನೀಡಬಹುದು: ವಿಷ್ಣುವು ಸೃಷ್ಟಿಯ ಸ್ಥಿತಿಕರ್ತನಾಗಿದ್ದಾನೆ. ಅಂದರೆ, ಅದರ ಯೋಗಕ್ಷೇಮವನ್ನು ಹಾಗೂ ಬೆಳವಣಿಗೆಯನ್ನು ನೋಡಿಕೊಳ್ಳುತ್ತಾನೆ. ಇದೇ ರೀತಿ ಗುರುವು ಜ್ಞಾನ ಜಗತ್ತಿನ ಪಾಲಕನಾಗಿದ್ದಾನೆ ಎನ್ನಬಹುದಲ್ಲವೇ? ಏಕೆಂದರೆ ಗುರುವು ಜ್ಞಾನದ ಹಸಿವನ್ನು ಹಿಂಗಿಸುತ್ತಾನೆ. ಅವನು ಶಿಷ್ಯರಿಗೆ ಜ್ಞಾನ, ಅನುಭವ, ಮಾಹಿತಿ ಒದಗಿಸುವ ಮೂಲಕ ಶಿಷ್ಯರ ಅಭ್ಯುದಯಕ್ಕೆ ಕಾರಣನಾಗುತ್ತಾನೆ. ಹಾಗೆಯೇ ಗುರುವನ್ನು ಶಿವನಿಗೂ ಹೋಲಿಸಲಾಗಿದೆ. ಶಿವನು ಶಾಂತಸ್ವರೂಪ, ಸದ್ಗುಣಸಂಪನ್ನ; ನಿಷ್ಕಲ್ಮಷ ವ್ಯಕ್ತಿತ್ವ ಅವನದು. ಇದಲ್ಲದೆ ಶಿವನು ಲಯಕರ್ತನೂ ಆಗಿದ್ದಾನೆ. ಗುರುವಾದವನು ಈ ಎಲ್ಲ ಗುಣಲಕ್ಷಣಗಳನ್ನೂ ಹೊಂದಿರಬೇಕು. ಶಿಷ್ಯರಲ್ಲಿ ಹುದುಗಿರುವ ಕೆಟ್ಟ ಗುಣಗಳನ್ನು ಅವನು ನಾಶ ಮಾಡಬೇಕು; ಸತ್ಯ, ಅಹಿಂಸೆ ಹಾಗೂ ಇತರ ಜೀವನಮೌಲ್ಯಗಳನ್ನು ಶಿಷ್ಯನಲ್ಲಿ ಬೆಳೆಸಿ, ಪೋಷಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಶಿಷ್ಯನಲ್ಲಿ ಕವಿದಿರುವ ಅಜ್ಞಾನವೆಂಬ ಕತ್ತಲನ್ನು ಲಯಮಾಡಬೇಕು ಅಂದರೆ ನಾಶಪಡಿಸಬೇಕು.

ಗುರುವು ಎಂದಿಗೂ ತನ್ನ ಗುರಿಯಿಂದ ವಿಮುಖನಾಗಬಾರದು. ಎಂತಹ ಕಷ್ಟಗಳು ಎದುರಾದರೂ ಅವನು ಸತ್ಯಮಾರ್ಗವನ್ನು ಬಿಡಕೂಡದು. ಭಾರತೀಯ ಶಿಕ್ಷಣವ್ಯವಸ್ಥೆ ಈ ಕಾರಣದಿಂದಾಗಿಯೆ ಜಗತ್ತಿನ ಅನೇಕ ತತ್ತ್ವಜ್ಞಾನಿಗಳ ಪ್ರಶಂಸೆಗೆ ಪಾತ್ರವಾಗಿದೆ. ಜರ್ಮನಿಯ ತತ್ತ್ವಜ್ಞಾನಿ ಮ್ಯಾಕ್ಸ್ ಮುಲ್ಲರ್ ಅನೇಕ ವರ್ಷಗಳ ಕಾಲ ಅಧ್ಯಯನ ನಡೆಸಿ, ಕೊನೆಗೆ ಹೀಗೆ ತೀರ್ಮಾನಕ್ಕೆ ಬರುತ್ತಾನೆ: "ಈ ಆಕಾಶದ ಛತ್ರದಡಿಯಲ್ಲಿ ಮಾನವನ ಆದಿ ಹಾಗೂ ಅಂತ್ಯದ ಸಮಸ್ಯೆಗಳ ಬಗ್ಗೆ ಪರಿಪೂರ್ಣವಾದ ಹಾಗೂ ನಿಖರವಾದ ಪರಿಹಾರವನ್ನು ಎಲ್ಲಾದರೂ ಕಂಡುಕೊಂಡಿದ್ದರೆ, ಅದು ಭಾರತದಲ್ಲಿ ಮಾತ್ರ."

ಶಿಕ್ಷಕ ಇಂದಿನ ಶಿಕ್ಷಣದ ಕೇಂದ್ರಬಿಂದು. ಭಾರತೀಯ ಪರಂಪರೆಯಲ್ಲಿ ಶಿಕ್ಷಕನನ್ನು ಸಸ್ಯಗಳನ್ನು ಪೋಷಿಸುವ ತೋಟದ ಮಾಲಿ, ಮಡಕೆ ಮಾಡುವ ಕುಂಬಾರ, ಸುಂದರ ವಿಗ್ರಹ ಮಾಡುವ ಶಿಲ್ಪಿ – ಎಂದೆಲ್ಲ ಹೋಲಿಸಲಾಗಿದೆ. ಹೇಗೆ ತೋಟದ ಮಾಲಿ ಸಸ್ಯಗಳಿಗೆ ನೀರೆರೆದು, ಕಸ ತೆಗೆದು ಅವುಗಳ ಬೆಳವಣಿಗೆಗೆ ಸಹಕರಿಸುವನೋ, ಹಾಗೆಯೇ ಶಿಕ್ಷಕನು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಎಲ್ಲ ಅಂಶಗಳನ್ನೂ ಧಾರೆಯೆರೆದು, ಅವರನ್ನು ಸ್ವಾವಲಂಬಿಗಳನ್ನಾಗಿ ಹಾಗೂ ವಿಚಾರವಂತರನ್ನಾಗಿ ಮಾಡುತ್ತಾನೆ. ಕುಂಬಾರನು ಹೇಗೆ ಮಣ್ಣನ್ನು ಹದಗೊಳಿಸಿ, ಮಡಕೆಗಳನ್ನು ಮಾಡುವನೋ ಹಾಗೆಯೇ ಶಿಕ್ಷಕನು, ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸುಂದರವಾಗಿ ರೂಪುಗೊಳಿಸುತ್ತಾನೆ. ಶಿಲ್ಪಿಯು ಕಲ್ಲನ್ನು ಕಟೆದು, ಸುಂದರ

ಹಾಗೂ ಆಕರ್ಷಕ ವಿಗ್ರಹಗಳನ್ನು ಮಾಡುವ ಹಾಗೆ ಶಿಕ್ಷಕನು ವಿದ್ಯಾರ್ಥಿಗಳನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ತಯಾರು ಮಾಡುತ್ತಾನೆ. ಜಾನ್ ರಸ್ಕಿನ್ ತನ್ನ ಕೃತಿಯಲ್ಲಿ ಐದು ಉದ್ಯೋಗಗಳ ಶ್ರೇಷ್ಠತೆಯನ್ನು ಕೊಂಡಾಡಿದ್ದಾನೆ. ಅವೆಂದರೆ, ಸೈನ್ಯದಲ್ಲಿ ಸೇವೆ ಮಾಡುವುದು, ವಕೀಲಿ ವೃತ್ತಿ, ವೈದ್ಯಕೀಯ ವೃತ್ತಿ, ಇಂಜಿನೀಯರ್ ಹಾಗೂ ಶಿಕ್ಷಕ ವೃತ್ತಿ. ಆ ಎಲ್ಲ ವೃತ್ತಿಗಳಿಗಿಂತ ಶಿಕ್ಷಕ ವೃತ್ತಿಯೇ ಶ್ರೇಷ್ಠ ಎಂದು ರಸ್ಕಿನ್ ಹೊಗಳುತ್ತಾನೆ. ಇದಕ್ಕೆ ಕಾರಣ, ಶಿಕ್ಷಕ ಉಳಿದ ನಾಲ್ಕು ವೃತ್ತಿಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ನಿರ್ಮಾಣ ಮಾಡುವವನಾಗಿದ್ದಾನೆ; ಸಮಾಜದ ಎಲ್ಲ ರಂಗಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಆಕರ ವ್ಯಕ್ತಿಯಾಗಿದ್ದಾನೆ. ಆದ್ದರಿಂದ ಅವನಿಗೆ ಇಂದಿಗೂ ಗೌರವದ ಸ್ಥಾನವನ್ನು ನೀಡಲಾಗಿದೆ.

ಶಿಕ್ಷಕನ ಪಾತ್ರ ಕಾಲಕಾಲಕ್ಕೆ ಬದಲಾಗುತ್ತಿದೆ. ಬದಲಾಗುತ್ತಿರುವ ಕಾಲಮಾನಕ್ಕೆ ಅನುಗುಣವಾಗಿ ಶಿಕ್ಷಕನಾದವನು ವಿದ್ಯಾರ್ಥಿಗಳನ್ನು ಸಿದ್ಧಗೊಳಿಸಬೇಕಾಗುತ್ತದೆ. ಇದೊಂದು ಮಹತ್ತರವಾದ ಜವಾಬ್ದಾರಿಯೇ ಸರಿ. ಜಾಗತೀಕರಣದ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಶಿಕ್ಷಣ ಮತ್ತು ತತ್ತ್ವಜ್ಞಾನಗಳು ನಮ್ಮ ಶಿಕ್ಷಣದ ಮೇಲೆ ಅಗಾಧ ಪ್ರಭಾವ ಬೀರುತ್ತಿವೆ. ಜಾಗತೀಕರಣವು ನಮ್ಮ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಗಳ ಮೇಲೆ ಆಗಾಧ ಪರಿಣಾಮ ಬೀರಿದೆ. ಭಾರತೀಯ ತತ್ತ್ವ ಶಾಸ್ತ್ರಕ್ಕೆ ವಿರುದ್ಧವಾದ ಭಾವನೆಗಳು ಈಗ ರೂಢಿಯಲ್ಲಿ ಬಂದಿವೆ. ಅವುಗಳಲ್ಲಿ ಕೆಲವು ಹೀಗಿವೆ: **ಅಸ್ತಿತ್ವಕ್ಕಾಗಿ ಹೋರಾಟ** (Struggle for existence), **ಬಲಿಷ್ಠರು ಮಾತ್ರವೇ ಬದುಕುಳಿಯುವುದು** (Survival of the fittest), **ನಿಸರ್ಗದ ಅತಿಯಾದ ಬಳಕೆ** (Exploitation of nature) ಮತ್ತು **ವ್ಯಕ್ತಿಗತ ಹಕ್ಕು** (Individual rights). ಈ ತತ್ತ್ವಗಳಿಗೆ ಭಾರತೀಯ ಚಿಂತನೆ ಯಲ್ಲಿ ಹೆಚ್ಚು ಮಹತ್ವವಿಲ್ಲ. ನಮ್ಮ ಭಾರತೀಯ ಚಿಂತನೆ ಹೇಗಿದೆಯೆಂದರೆ ಇಲ್ಲಿ ನಾವು ಬದುಕುವುದಕ್ಕಾಗಿ ಹೋರಾಟ ಮಾಡಬೇಕಿಲ್ಲ, ಅದಕ್ಕೆ ಬದಲಾಗಿ, ಎಲ್ಲರೂ ಕೂಡಿ ಸಹಕಾರ ಮನೋಭಾವದಿಂದ ಬದುಕುಬೇಕು (co-existence). ನಮ್ಮಲ್ಲಿ ಎಲ್ಲ ಜೀವಿಗಳಿಗೂ ಬದುಕುವ ಸಮಾನ ಅವಕಾಶವನ್ನು ಕಲ್ಪಿಸಲಾಗಿದೆ. ನಿಸರ್ಗದ ಪ್ರತಿಯೊಂದು ವಸ್ತು ಹಾಗೂ ಪ್ರಾಣಿಯನ್ನೂ ಸಮಾನತೆಯಿಂದ ನೋಡಿಕೊಳ್ಳುವುದು ಭಾರತೀಯ ಪರಂಪರೆಯ ಶ್ರೇಷ್ಠತೆ. ಕನಿಷ್ಠರ ಏಳ್ಗೆ, ಬಿದ್ದವನನ್ನು ಎತ್ತಿ ಹಿಡಿಯುವುದು ಭಾರತೀಯ ಸಭ್ಯತೆಯ ಆಶಯಗಳಾಗಿವೆ. ಇದಲ್ಲದೆ, ಭಾರತೀಯ ಸಂಸ್ಕೃತಿಯ ಪ್ರಕಾರ, ನಿಸರ್ಗವನ್ನು ಬೇಕಾಬಿಟ್ಟಿ ಉಪಯೋಗಿಸುವುದು ಒಂದು ಪಾಪಕಾರ್ಯ. ಮಗು ಹಸಿದಾಗ ತನಗೆ ಹೊಟ್ಟೆ ತುಂಬುವಷ್ಟು ಹಾಲನ್ನು ಪಡೆದುಕೊಳ್ಳುತ್ತದೆ, ತಾಯಿಯ ಮೊಲೆಯಿಂದ ರಕ್ತವನ್ನು ಹೀರುವುದಿಲ್ಲ. ನಿಸರ್ಗದ ಬಗ್ಗೆ ಭಾರತೀಯರು ತಳೆದಿರುವ ಧೋರಣೆ ಇದೇ. ಮಾನವನ ಬದುಕಿಗೆ ಬೇಕಾದ ಎಲ್ಲವನ್ನೂ ನಿಸರ್ಗ ಒದಗಿಸುತ್ತದೆ. ಹಾಗಾಗಿ ಭಾರತೀಯರು ಭೂಮಿಯನ್ನು ತಾಯಿಗೆ ಹೋಲಿಸುತ್ತಾರೆ. ಪಾಶ್ಚಾತ್ಯರು ಬಹುತೇಕ, ವೈಯಕ್ತಿಕ ಹಕ್ಕಿಗೆ ಹಾಗೂ ವೈಯಕ್ತಿಕ ಹಿತಾಸಕ್ತಿಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ. ಆದರೆ ಭಾರತೀಯ ಸಂಪ್ರದಾಯದಲ್ಲಿ ಸಮಷ್ಟಿಯ ಹಿತಕ್ಕೆ ಅನುಗುಣವಾಗಿ ಬಾಳುವುದಕ್ಕೇ ಮಹತ್ವ ನೀಡಲಾಗಿದೆ. ಇದನ್ನು ನಾವು ವೇದಗಳಲ್ಲಿ ಹೇಳಿರುವ 'ಋತ' ಮತ್ತು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಉಪದೇಶಿಸುವ 'ಯಜ್ಞ ಭಾವನೆ'ಯಲ್ಲಿ ಸ್ಪಷ್ಟವಾಗಿ ನೋಡಬಹುದು. ಭಾರತೀಯ ಚಿಂತನೆಯ ಈ ಎಲ್ಲ ಉದಾತ್ತ ಮೌಲ್ಯಗಳನ್ನು ಅರಗಿಸಿಕೊಂಡು, ತನ್ನ ವಿದ್ಯಾರ್ಥಿಗಳಿಗೆ ಸೂಕ್ತರೀತಿಯಲ್ಲಿ ಸಂವಹನ ಮಾಡುವುದು, ಪ್ರತಿಯೊಬ್ಬ ಗುರು ಅಥವಾ ಶಿಕ್ಷಕನ ಆದ್ಯಕರ್ತವ್ಯ.

ಜಾಗತೀಕರಣದಿಂದ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ತೀವ್ರ ಬೆಳವಣಿಗೆಗಳು ಉಂಟಾಗಿವೆ. ಕಳೆದ ಎರಡು ದಶಕಗಳಲ್ಲಿ ಎಲ್ಲ ಬಗೆಯ ಕ್ಷೇತ್ರಗಳೂ ಜಾಗತೀಕರಣದ ಪ್ರಭಾವಕ್ಕೆ ಒಳಪಟ್ಟಿವೆ. ಜಾಗತೀಕರಣವು ದೇಶ-ದೇಶಗಳ ಮಧ್ಯೆ ನಿಕಟ ಸಂಬಂಧ ಕಲ್ಪಿಸಿದೆ. ಹೀಗಾಗಿ ಭಾರತೀಯ ಅರ್ಥವ್ಯವಸ್ಥೆ ಎಂದಿಗಿಂತಲೂ ಹೆಚ್ಚಾಗಿ ಬದಲಾವಣೆಗೊಂಡಿದೆ. ಇದಕ್ಕೆ ಶಿಕ್ಷಣ ಕ್ಷೇತ್ರವೂ ಹೊರತಾಗಿಲ್ಲ. ಈ ಸನ್ನಿವೇಶದಲ್ಲಿ ಶಿಕ್ಷಕನ ಜವಾಬ್ದಾರಿ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಪರಿವರ್ತನೆಗೊಂಡ ಸನ್ನಿವೇಶಕ್ಕೆ ಅನುಗುಣವಾಗಿ ಶಿಕ್ಷಕನು ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕಾಗಿದೆ. ಈಗಿನ ವಿದ್ಯಾರ್ಥಿಗಳು ಹಿಂದಿನ ವಿದ್ಯಾರ್ಥಿಗಳಂತಿಲ್ಲ. ಶಿಕ್ಷಕರನ್ನೂ ಮೀರಿಸುವಂಥ ಬುದ್ಧಿಮತ್ತೆ ಉಳ್ಳವರಾಗಿದ್ದಾರೆ. ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ನೀಡಿದ ವಿದ್ಯೆಯನ್ನು ಮಾತ್ರ ಸ್ವೀಕರಿಸುತ್ತಿದ್ದರು. ಈಗ ಹಲವಾರು ಮೂಲಗಳಿಂದ ಅವರು ವಿದ್ಯೆಯನ್ನು ಪಡೆಯಬಹುದು. ಕಂಪ್ಯೂಟರ್ ಅಂತರ್ಜಾಲದ ಮೂಲಕ ವಿದ್ಯಾರ್ಥಿಗಳು ಅಗಾಧವಾದ ಮಾಹಿತಿಯನ್ನು ಸಂಗ್ರಹಿಸುವ ಅವಕಾಶವಿದೆ. ಆದ್ದರಿಂದ ಈ ಕಾಲವನ್ನು 'ಮಾಹಿತಿ ಯುಗ' ವೆಂದು ಕರೆಯುವರು. ಕೆಲವೊಂದು ಸಲ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಶಿಕ್ಷಕನ ಪಾತ್ರ ನಗಣ್ಯ ಎಂದೆನ್ನಿಸಬಹುದು. ಆದರೆ ಏಷ್ಟಾದರೂ, ಯಂತ್ರಗಳು ಯಂತ್ರಗಳೇ! ವಿದ್ಯಾರ್ಥಿಗಳಿಗೆ ಶಿಕ್ಷಕರು ಸ್ಪಂದಿಸುವಷ್ಟು ಬೇರಾರೂ ಸ್ಪಂದಿಸುವುದಿಲ್ಲ. ಅಲ್ಲದೆ, ಯಂತ್ರಗಳು ಬೇಕಾದ, ಬೇಡದ – ಎರಡೂ ರೀತಿಯ ಮಾಹಿತಿಯನ್ನು ನಮಗೆ ಒದಗಿಸುತ್ತವೆ. ಆದರೆ ಶಿಕ್ಷಕನಾದವನು, ವಿದ್ಯಾರ್ಥಿಗಳಿಗೆ ಯಾವುದು ಕಲ್ಯಾಣಕರವೋ, ಶ್ರೇಯಸ್ಕರವೋ ಅಂತಹ ಮಾಹಿತಿಯನ್ನು ಮತ್ತು ಜ್ಞಾನವನ್ನು ಮಾತ್ರ ಒದಗಿಸುತ್ತಾನೆ.

ಒಬ್ಬ ಆದರ್ಶ ಶಿಕ್ಷಕ, ವಿದ್ಯಾರ್ಥಿಗಳ ಅಂತರಾಳವನ್ನು ತಿಳಿದುಕೊಂಡು, ಬೇಕಾದುದನ್ನು ಮಾತ್ರ ನೀಡಿ, ಬೇಡವಾದುದನ್ನು ಕಳೆಯುವ ಗುರುತರ ಕೆಲಸವನ್ನು ಮಾಡುತ್ತಾನೆ. ಈ ಹಿಂದೆ